ಹೊಡೀತೀರಾ?' ದಾರಿಯಲ್ಲಿ ಆಡುತ್ತಿದ್ದ ಪರಿಚಯದ ನಾಕಾರು ಚಿಳ್ಳೆಗಳು ಕಿರುಲಿದವು. 'ಓ ಏನ್ರೀ...ವಾಕಿಂಗ್ ಬಿಟ್ಟು ಇನ್ನು ಸೈಕಲ್ಲಾ' ಒಂದಿಬ್ಬರು ವಾಕಿಂಗ್ ಪರಿಚಿತ ಮುಖಗಳು ಪ್ರಶ್ನಾರ್ಥಕ ಚಿಹ್ನೆಯನ್ನು ಎಸೆದರು.

ಮತ್ತೆ ಶುರುವಾಯಿತು ವಿನುತಾಳ ಹೊಸಹುರುಪಿನ ದಿನಚರಿ. ವಾರಾಂತ್ಯದಲ್ಲಿ ಬೆಳಗ್ಗೆ ಬೇಗನೆದ್ದು ವಾಕಿಂಗ್ ಹೋಗ್ತಿದ್ದೀನಿ ಎಂದು ಬಾಗಿಲೆಳೆದುಕೊಂಡು ಹೊರಟ ವಿನುತಾಳ ಸೈಕಲ್ ಸವಾರಿ ಮೊದಮೊದಲು ಅಪಾರ್ಟ್ಮೆಂಟಿನ ಒಳಗೆ, ಆಮೇಲೆ ಒಂದೆರಡು ವಾರದ ನಂತರ ಹಿಂದಿನ ರಸ್ತೆಗೆ, ಆಮೇಲೆ ಅಲ್ಲಿಂದ ತುಸು ಮುಂದೆ ಸಾಗಿ, ಇನ್ನೂ ಲೇಔಟ್ ಆಗುತ್ತಿದ್ದ ಬಡಾವಣೆ. ಅದೇ ರಸ್ತೆಯಲ್ಲಿ ತುಸು ಮುಂದೆ ಹೋದರೆ ಚಿಕ್ಕದೊಂದು ಕೆರೆ. ಕೆರೆಯಿಂದ ಇನ್ನೂ ಸ್ವಲ್ಪ ಮುಂದೆ ಹೋದರೆ ಒಂದು ದಿಬ್ಬ. ಇಲ್ಲಿಯವರೆಗಿನ ಜಾಗವನ್ನು ಕಂಡುಕೊಳ್ಳಲು ವಿನುತಾಳಿಗೆ ಹೆಚ್ಚುಕಡಿಮೆ ತಿಂಗಳೇ ಹಿಡಿದಿತ್ತು. ಅಷ್ಟರಲ್ಲಿ ಸೈಕಲ್ ಚೆನ್ನಾಗಿ ಅಭ್ಯಾಸವಾಯಿತು. ರಮೇಶ ವಾರಾಂತ್ಯದಲ್ಲಿ ಸಂಜೆಯ ನಾಟಕಕ್ಕೇನಾದರೂ ಹೋದರೆ, ಆಗಲೂ ಕೆಲವೊಮ್ಮೆ ತನ್ನ ಮಾಮೂಲು ದಾರಿ ಹಿಡಿದು, ದಿಬ್ಬಕ್ಕೊಂದು ಭೇಟಿ ನೀಡಿ ಬರುವವಳೆ. ಪುಣೆಯಲ್ಲಿ ಕೆಲಸದಲ್ಲಿದ್ದ ಮಗಳ ಜೊತೆಗೆ ಹೆಚ್ಚುಕಡಿಮೆ ಪ್ರತಿದಿನವೂ ಫೋನಿನಲ್ಲಿ ಮಾತನಾಡುತ್ತಿದ್ದರೂ ಈ ವಿಚಾರ ತಿಳಿಸಲಿಲ್ಲ. ಅವಳು ಹೇಗೂ ಮುಂದಿನ ತಿಂಗಳು ವಾರ ರಜೆ ತೆಗೆದುಕೊಂಡು ಬರುತ್ತೀನಿ ಎಂದಿದ್ದಾಳಲ್ಲ ಆಗ ಹೇಳಿದ್ರಾಯ್ತು. ಎಲ್ಲೆಲ್ಲೋ ಟ್ರೆಕಿಂಗ್ ಹೋಗುತ್ತಾಳಲ್ಲ. ಎಷ್ಟೋ ಸಲ ಟ್ರೆಕಿಂಗ್ ಹೋಗಿ ಬಂದ ನಂತರ ಹೇಳುತ್ತಾಳಲ್ಲ. ಹಂಗೇ ಇದು. ಗೆಳತಿ ಮೇಗಲೆ, ರಾಜೋ, ಮಗಳು, ಅಷ್ಟೇಕೆ, ರಮೇಶ ಕೂಡ ಎಷ್ಟು ಬಿಡುಬೀಸಾಗಿ ತಮ್ಮದೇ ಲೋಕ ಕಟ್ಟಿಕೊಂಡರಲ್ಲ. ಆ ಒಳಲೋಕದ ಬಾಗಿಲನ್ನು ನನಗೆ ತೆರೆಯಲಿಲ್ಲವಲ್ಲ. ಹಾಗೆಯೇ ಇದು ನನ್ನ ಲೋಕ. ಕಳೆದ ಏಳೆಂಟು ತಿಂಗಳಿನಿಂದ ಹುಡುಕುತ್ತಿದ್ದೆನಲ್ಲ ಎಲ್ಲಿದೆ ನನ್ನ ಲೋಕ, ಯಾರಿವಳು ಇಲ್ಲಿ ಈ ದಿನಚರಿಯ ಬಣ್ಣ ಮಾಸಿದ ಪುಟಗಳಲ್ಲಿ ಕದಲದೇ ನಿಂತವಳು ಎಂದು ಕಂಗಾಲಾಗಿದ್ದೆನಲ್ಲ. ಇದೀಗ ಇಲ್ಲಿ ತೆರೆದಿದೆ ನನ್ನ ಸೈಕಲ್ ಸವಾರಿಯ ಲೋಕ. ಪೆಡಲ್ ತುಳಿಯುತ್ತ ಹೋದಂತೆ, ಎದುರಿನ ರಸ್ತೆ ತೆರೆದುಕೊಳ್ಳುತ್ತ ಸಾಗಿದಂತೆ ಸುಂಯ್‌ಗುಡುವ ಗಾಳಿ ಮೈತಬ್ಬಿದಂತೆ ನನ್ನೊಳಗೆ ಮೈತಳೆಯುವ ನನ್ನೊಬ್ಬಳದೇ ಲೋಕ ಎಂದು ತನ್ನೊಳಗೇ ಅದೆಷ್ಟನೆಯ ಬಾರಿಗೋ ಹೇಳಿಕೊಂಡಿದ್ದಳು.

ಆ ಭಾನುವಾರ ಬೆಳಗ್ಗೆ ಬೇಗನೆ ಎದ್ದು, ಬಾಗಿಲು ಹಾಕ್ಕೋ ಎಂದು ನಿದ್ದೆಗಣ್ಣಿನಲ್ಲಿದ್ದ ರಮೇಶನಿಗೆ ಹೇಳಿ, ವಿನುತಾಳ ಸೈಕಲ್ ಸವಾರಿ ಹೊರಟಿತು. ಈಗ ಆ ದಿಬ್ಬವನ್ನೂ ದಾಟಿಕೊಂಡು, ಚಿಕ್ಕ ರಸ್ತೆಯಲ್ಲಿ ಇನ್ನೂ ಮುಂದೆ ಹೋಗುತ್ತಿದ್ದಳು. ಆ ಕಡೆಗೆ ಅದಾವುದೋ ಚಿಕ್ಕ ಹಳ್ಳಿ. ಇನ್ನೂ ಬೃಹತ್ ಬೆಂಗಳೂರಿನ ತೆಕ್ಕೆಗೆ ಸಿಗದ ಹಳ್ಳಿ. ಅಲ್ಲಿಂದ ಮರಳಿ ಬಂದು ತುಸು ಹೊತ್ತು ದಿಬ್ಬದ ಮೇಲೆ ಕುಳಿತು ಬರೋಣ ಎಂದುಕೊಂಡಿದ್ದಳು. ಅಂದು ಹಾಗೆ ಚಿಕ್ಕ ರಸ್ತೆಗೆ ಹೊರಳಿ ಸ್ವಲ್ಪ ಮುಂದೆ ಸಾಗುವಷ್ಟರಲ್ಲಿ ಯಾಕೋ ಹೊಟ್ಟೆಯೆಲ್ಲ ಒಂಥರಾ ಆದಂತೆ. ಕಿಬ್ಬೊಟ್ಟೆಯಿಂದ ಮೆಲ್ಲಗೆ ಎದ್ದ ನೋವು. ಅರೆ. ಯಾವ ತಾರೀಕು ಇದು ಎಂದು ನೆನಪಿಸಿಕೊಳ್ಳಲು ಯತ್ನಿಸುತ್ತ. ಈಗ ಮೆನೋಪಾಸು ಶುರುವಾದಾಗಿನಿಂದ ಎರಡು ಮೂರು ತಿಂಗಳಿಗೊಮ್ಮೆ ಬಂದು, ಹೈರಾಣ ಮಾಡುವ ಪೀರಿಯೆಡ್ ಎಂಬ ಪೀರಿಯೆಡ್ಡೇ ಇದು. ಯೋಚಿಸುತ್ತ ಸೈಕಲಿನಿಂದ ಇಳಿಯುವಷ್ಟರಲ್ಲಿ ತೊಡೆಸಂದಿಯಲ್ಲಿ ಒದ್ದೆಯಾದಂತೆ ಅನ್ನಿಸುತ್ತ. ಅನ್ನಿಸುವುದೇನು ಬಂತು. ಇನ್ನು ಧಾರೆ ಶುರು ಎಂದುಕೊಳ್ಳುತ್ತ. ವಿನುತಾಳಿಗೆ ಮುಖವೆಲ್ಲ ಬೆವರಿತು. ಕಿಬ್ಬೊಟ್ಟೆಯ ನೋವು ಕ್ಷಣಕ್ಷಣಕ್ಕೂ ಹೆಚ್ಚಾಗುತ್ತ, ಏನು ಮಾಡಲು ತೋಚದೇ ಅರೆಕ್ಷಣ ಹಾಗೆಯೇ ನಿಂತಳು. ಬೆನ್ನ ಹಿಂದಿನ ಚೀಲದಿಂದ ಬಾಟಲಿ ತೆಗೆದು ಗಟಗಟನೆ ಎರಡು ಗುಟುಕು ನೀರು ಕುಡಿದಳು. ವಾಪಾಸು ಹೋಗಿಬಿಡಣ ಎಂದುಕೊಂಡು ಸೈಕಲ್ ತಿರುಗಿಸಿದಳು.

ತುಸು ದೂರ ಸೈಕಲ್ ದಬ್ಬಿಕೊಂಡು ಬರುವಷ್ಟರಲ್ಲಿ, ಹೆಜ್ಜೆ ಕಿತ್ತಿಡಲಾರೆ ಎನ್ನಿಸಿಬಿಟ್ಟಿತು. ಪೆಡಲ್ ತುಳಿಯಲೂ ತ್ರಾಣವಿಲ್ಲ. ಹ್ಯಾಂಡಲ್ ಹಿಡಿದ ಕೈ ಸಣ್ಣಗೆ ನಡುಗುತ್ತಿದೆ. ಕಳೆದ ಸಲ ರಕ್ತಸ್ರಾವ ನಿಲ್ಲದೇ ಮಾಧುರಿ ಡಾಕ್ಟರ್ ಹತ್ತಿರ ಹೋಗಿದ್ದು ನೆನಪಾಯಿತು. ಈಸಲವೂ ಹಂಗೇ ಆದರೆ ಗತಿಯೇನಪ್ಪ ಎನ್ನಿಸಿತು. ದಿಬ್ಬದ ಬಳಿ ಬರುವಷ್ಟರಲ್ಲಿ ಇದಕ್ಕೇನಾದರೂ ಮೊದಲು ಮಾಡಬೇಕಲ್ಲ ಎಂದು ಯೋಚಿಸುತ್ತ ಆಚೆ ಈಚೆ ನೋಡಿದಳು. ಮೊಬೈಲ್ ತೆರೆದು, ಸಮಯ ನೋಡಿದಳು. ಆರೂವರೆ. ಜನರ ಓಡಾಟ ಇನ್ನೂ ಶುರುವಾಗಿರಲಿಲ್ಲ. ಅಕಸ್ಮಾತ್